ರಾಜ್ಯ

# ಬೆಂಗಳೂರಿನ ಸಹಸ್ರ ಐಸಿಎಸ್‌ಇ ಪರೀಕ್ಷೆಯಲ್ಲಿ ಟಾಪರ್

By **ಕನ್ನಡ ಪ್ಲಾನೆಟ್ ವಾರ್ತೆ** *May 8, 2024*




Explore our developer-friendly HTML to PDF API Printed using PDFCrowd HTML to PDF

ಬೆಂಗಳೂರು: ಐಸಿಎಸ್‌ಇ 10 ಮತ್ತು 12ನೇ ತರಗತಿ ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟಗೊಂಡಿದ್ದು, ಗೋಪಾಲನ್‌ಇಂಟರ್ ನ್ಯಾಷನಲ್ ಸ್ಕೂಲ್ (ಜಿಐಎಸ್‌ಎಸ್)ನ ವಿದ್ಯಾರ್ಥಿನಿ ಸಹಸ್ರ ಶೇ.99.4ರಷ್ಟು ಫಲಿತಾಂಶದ ಮೂಲಕ ನಗರದ ಟಾಪರ್ ಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ.

ವಿದ್ಯಾರ್ಥಿನಿ ಸಹಸ್ರ ಎಲ್ಲಾ ಹಂತಗಳಲ್ಲಿಯೂ ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ತೊಡಗಿಕೊಂಡಿದ್ದಾರೆ. ಈ ಮೂಲಕ ಕಳೆದ ಬಾರಿ 9ನೇ ತರಗತಿ ಫಲಿತಾಂಶದಲ್ಲೂ ಕೂಡ ಉನ್ನತ ಸಾಧನೆ ಮಾಡಿದ್ದರು. ಓದುವುದರ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಸಹಸ್ರ, ಸಹಸ್ರಪಟ್ಟು ಮುಂದಿದ್ದಾರೆ.

ಕಂಪ್ಯೂಟರ್ ವಿಜ್ಞಾನದ ಬಗೆಗೆ ಒಲವು ಇದ್ದ ಕಾರಣ ಶೈಕ್ಷಣಿಕ ಹಂತದಲ್ಲೇ ಹಾವರ್ಡ್ ವಿಶ್ವವಿದ್ಯಾಲಯದಲ್ಲಿ CS50 ಆನ್‌ಲೈನ್ ಕೋರ್ಸ್ ಅನ್ನು ತೆಗೆದುಕೊಂಡು ಅಧ್ಯಯನ ನಡೆಸುತ್ತಿದ್ದರು. ಈ ಸಮಗ್ರ ಕೋರ್ಸ್ ಮೂಲಕ ಕಂಪ್ಯೂಟರ್ ನ ವ್ಯಾಪಕವಾದ ಜ್ಞಾನವನ್ನು ಚಿಕ್ಕ ವಯಸ್ಸಿನಲ್ಲೇ ಗಳಿಸಿಕೊಂಡಿದ್ದಾರೆ.

ಸಹಸ್ರ ಕೇವಲ ಓದಿನಲ್ಲಿ ಮಾತ್ರವಲ್ಲದೆ ಸಂಗೀತದಲ್ಲೂ ಸಾಧನೆ ಮಾಡಿದ್ದಾರೆ. ಗೋಪಾಲನ್ ಇಂಟರ್‌ನ್ಯಾಷನಲ್ ಸ್ಕೂಲ್ ವೆಸ್ಟರ್ನ್ ಬ್ಯಾಂಕ್‌ನ ಜಿಮ್ಮೆನರ್ಸ್ ನ ಪ್ರಮುಖ ಗಾಯಕರಾಗಿದ್ದಾರೆ. ಇವರು ಭಾಗವಹಿಸುವ ಬ್ಯಾಂಡ್ ಹಲವಾರು ಅಂತರ್ ಶಾಲಾ ಸ್ಪರ್ಧೆಗಳಲ್ಲಿ ಮೊದಲ ಸ್ಥಾನ ಗಳಿಸಿದೆ.

ಸಹಸ್ರ ಅಧ್ಯಯನ ಮತ್ತು ಇತರ ಕ್ಷೇತ್ರಗಳಲ್ಲಿ ಆತ್ಮಸ್ಥೈರ್ಯದಿಂದ ಮುನ್ನುಗ್ಗುತ್ತಾರೆ. ಸ್ಪರ್ಧಾತ್ಮಕ ಮನೋಭಾವವನ್ನು ಹೊಂದಿರುವ ಅವರು ಎಲ್ಲದರಲ್ಲೂ ಪರಿಪೂರ್ಣತೆಯನ್ನು ಬಯಸುತ್ತಾರೆ. ಸಂಗೀತ ಮತ್ತು ಶೈಕ್ಷಣಿಕ ಅಧ್ಯಯನವನ್ನು ಸಮತೋಲನದಿಂದ ತೆಗೆದುಕೊಂಡು ಹೋಗುತ್ತಿರುವ ಸಹಸ್ರ ಮುಂದಿನ ದಿನಗಳಲ್ಲಿ ಅನೇಕ ಸಾಧನೆಗಳನ್ನು ಮಾಡುವ ಮೂಲಕ ಪೋಷಕರಿಗೆ ಮತ್ತು ದೇಶಕ್ಕೆ ಗೌರವ ತಂದುಕೊಡುವ ಹಂಬಲದಲ್ಲಿದ್ದಾರೆ.



## Latest article

ರಾಜ್ಯದ ಎಲ್ಲೆಡೆ ಉತ್ತಮ ಮಳೆ: ಮಂಡ್ಯದಲ್ಲಿ ಭರ್ಜರಿ ಮಳೆ



ಬಿಜೆಪಿ ವಿರುದ್ಧ ಸಿಡಿದೆದ್ದ ರಘುಪತಿ ಭಟ್ : ಪರಿಷತ್ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಲು ನಿರ್ಧಾರ



Explore our developer-friendly HTML to PDF API Printed using PDFCrowd HTML to PDF


ಮಂಡ್ಯದಲ್ಲಿ ಬಿರುಗಾಳಿ ಸಹಿತ ಮಳೆ, ರೈಲಿನ ಮೇಲೆ ಬಿದ್ದ ಮರ ; ಲೋಕೋ ಪೈಲಟ್‌ಗೆ ಗಾಯ



ಪ್ರಜ್ವಲ್ ಲೈಂಗಿಕ ಹಗರಣ: ಪ್ರಜ್ಞಾವಂತ ನಾಗರಿಕರಿಂದ ಮುಖ್ಯಮಂತ್ರಿಗೆ ಪತ್ರ



ಮುಂಬೈನಲ್ಲಿ ಜಾಹೀರಾತು ಫಲಕ ಬಿದ್ದು ಅವಘಡ: ಸತ್ತವರ ಸಂಖ್ಯೆ 14ಕ್ಕೆ ಏರಿಕೆ



Explore our developer-friendly HTML to PDF API Printed using PDFCrowd HTML to PDF